# ಸೇವೆಯಿಂದ ಶೀಘ್ರ ಆಧ್ಯಾತ್ಮಿಕ ಉನ್ನತಿಯಾಗಲು ಏನು ಮಾಡಬೇಕು ?

## ಮನೋಗತ

‘ಮನುಷ್ಯನ ಮನಸ್ಸು ಸ್ವಾಭಾವಿಕವಾಗಿಯೇ ಅಸ್ಥಿರವಾಗಿರುತ್ತದೆ. ಒಂದು ಕಡೆ ಕುಳಿತು ಗಂಟೆಗಟ್ಟಲೆ ನಾಮಜಪ ಮಾಡುವುದು, ಧ್ಯಾನಧಾರಣೆ ಮಾಡುವುದು ಇವುಗಳಂತಹ ಸಾಧನಾವಿಧಗಳಲ್ಲಿ ಮನಸ್ಸನ್ನು ಒಂದೇ ಕಡೆ ಸ್ಥಿರಗೊಳಿಸಬೇಕಾಗುತ್ತದೆ. ಆದ್ದರಿಂದ ಈ ಸಾಧನಾವಿಧಗಳಲ್ಲಿ ಸಾಮಾನ್ಯ ವಾಗಿ ಸಾಧಕನ ಮನಸ್ಸು ರಮಿಸುವುದು ಸ್ವಲ್ಪ ಕಠಿಣವಾಗಿರುತ್ತದೆ. ಇದಕ್ಕೆ ವಿರುದ್ಧವಾಗಿ ‘ಸತ್ಸೇವೆ (ಸೇವೆ)’ಯ ಸಾಧನಾವಿಧದಲ್ಲಿ ಶರೀರ ಮತ್ತು ಬುದ್ಧಿಗಳಿಂದಾಗುವ ವಿವಿಧ ಕರ್ಮಗಳಲ್ಲಿ (ಉದಾ. ಅಧ್ಯಾತ್ಮಪ್ರಸಾರ ಮಾಡು ವುದು, ಗ್ರಂಥಗಳಿಗಾಗಿ ಲೇಖನಗಳನ್ನು ಸಿದ್ಧಪಡಿಸುವುದು) ಸಾಧಕನ ಮನಸ್ಸು ರಮಿಸುವುದು ಅದರ ತುಲನೆಯಲ್ಲಿ ಸುಲಭವಾಗಿರುತ್ತದೆ. ಸೇವೆ ಗಳ ಮಾಧ್ಯಮದಿಂದ ಸಾಧಕನ ಮನಸ್ಸು, ಬುದ್ಧಿ ಮತ್ತು ಅಹಂ ಇವು ಈಶ್ವರನ ಚರಣಗಳಲ್ಲಿ ಬೇಗನೇ ಲಯವಾಗುವುದರಿಂದ ಸೇವೆಗಳ ಮಾಧ್ಯಮದಿಂದ ಸಾಧಕನ ಆಧ್ಯಾತ್ಮಿಕ ಉನ್ನತಿಯೂ ಬೇಗನೇ ಆಗುತ್ತದೆ. ಸೇವೆಯು ಸಾಧಕರ ಸಾಧನೆಗಾಗಿ ಪ್ರಾಣವಾಯುವಿನಂತೆಯೇ ಆಗಿದೆ !

ಹೇಗೆ ನಾಮಜಪವನ್ನು ಭಾವಪೂರ್ಣ ಅಂತಃಕರಣದಿಂದ ಮಾಡ ದಿದ್ದರೆ, ಅದು ಗುರು ಅಥವಾ ಈಶ್ವರನಿಗೆ ತಲುಪುವುದಿಲ್ಲವೋ, ಹಾಗೆಯೇ ಸೇವೆಯನ್ನು ಭಾವಪೂರ್ಣ ಮತ್ತು ಪರಿಪೂರ್ಣವಾಗಿ ಮಾಡದಿದ್ದರೆ ಅದು ಗುರು ಅಥವಾ ಈಶ್ವರನಿಗೆ ತಲುಪುವುದಿಲ್ಲ. ಸೇವೆಯನ್ನು ಭಾವಪೂರ್ಣ ಮತ್ತು ಪರಿಪೂರ್ಣವಾಗಿ ಮಾಡಿದರೆ ಮಾತ್ರ ಅದರಿಂದ ಚೈತನ್ಯ ಸಿಗುತ್ತದೆ,

ಆಧ್ಯಾತ್ಮಿಕ ಉಪಾಯಗಳಾಗುತ್ತವೆ ಹಾಗೂ ಆಧ್ಯಾತ್ಮಿಕ ಉನ್ನತಿಯೂ ಶೀಘ್ರವಾಗಿ ಆಗುತ್ತದೆ. ಸೇವೆಯು ಭಾವಪೂರ್ಣ ಮತ್ತು ಪರಿಪೂರ್ಣ ವಾಗಲು ಮನಸ್ಸಿನ ಸ್ತರದಲ್ಲಿ ಬರುವ ಅಡಚಣೆಗಳನ್ನು ದೂರಗೊಳಿಸಲು ಉಪಯುಕ್ತವಾಗಿರುವ ದೃಷ್ಟಿಕೋನಗಳನ್ನು ಪ್ರಸ್ತುತ ಕಿರುಗ್ರಂಥದಲ್ಲಿ ಕೊಡಲಾಗಿದೆ. ಸೇವೆಯು ಭಾವಪೂರ್ಣ ಮತ್ತು ಪರಿಪೂರ್ಣವಾಗುವುದ ರೊಂದಿಗೆ ಅದರಿಂದ ಹೆಚ್ಚೆಚ್ಚು ಫಲನಿಷ್ಪತ್ತಿ (‘ಔಟ್‌ಪುಟ್’) ಸಿಗಲು ಕೃತಿಯ ಸ್ತರದಲ್ಲಿ ಏನೇನು ಪ್ರಯತ್ನಗಳನ್ನು ಮಾಡಬೇಕು ಎಂಬುದನ್ನೂ ಈ ಕಿರುಗ್ರಂಥದಲ್ಲಿ ಕೊಡಲಾಗಿದೆ.

ಒಬ್ಬೊಬ್ಬರೇ ತಮ್ಮ ತಮ್ಮ ಸೇವೆಯನ್ನು ಮಾಡುವುದು ಸುಲಭ ವಾಗಿರುತ್ತದೆ, ಆದರೆ ಸಹಸಾಧಕರೊಂದಿಗೆ ಸೇವೆಯನ್ನು ಮಾಡುವುದು ಕೆಲವು ಸಾಧಕರಿಗೆ ಸ್ವಲ್ಪ ಕಠಿಣವೆನಿಸುತ್ತದೆ. ಏಕೆಂದರೆ ಇಲ್ಲಿ ಎಲ್ಲರೊಂದಿಗೆ ಹೊಂದಿಕೊಂಡು ಸೇವೆಯನ್ನು ಮಾಡಬೇಕಾಗುತ್ತದೆ. ಇಂತಹ ಸಮಷ್ಟಿ ಸೇವೆಯನ್ನು ಮಾಡುವಾಗ ಸಾಧಕರಿಗೆ ಉಪಯುಕ್ತವಾಗಿರುವ ದೃಷ್ಟಿಕೋನ ಗಳನ್ನೂ ಈ ಕಿರುಗ್ರಂಥದಲ್ಲಿ ನೀಡಲಾಗಿದೆ.

ವ್ಯವಹಾರದಲ್ಲಿನ ಕರ್ಮಗಳು, ಸಮಾಜಸೇವೆ, ರಾಷ್ಟ್ರಕಾರ್ಯ ಇತ್ಯಾದಿ ಗಳನ್ನೂ ‘ಸತ್ಸೇವೆ’ ಎಂದು ಮಾಡಿದರೆ ಅದರಿಂದ ಆಧ್ಯಾತ್ಮಿಕ ದೃಷ್ಟಿಯಿಂದ ಲಾಭವೇ ಆಗುತ್ತದೆ. ಆದ್ದರಿಂದ ಈ ಕಿರುಗ್ರಂಥದಲ್ಲಿನ ವಿವೇಚನೆಯು ಕೇವಲ ಸಾಧಕರಿಗಷ್ಟೇ ಅಲ್ಲದೇ ಸಮಾಜದಲ್ಲಿನ ಪ್ರತಿಯೊಬ್ಬರಿಗೂ ಉಪಯುಕ್ತವಾಗಿದೆ.

卐 ——— 卐

ಈ ಕಿರುಗ್ರಂಥದಲ್ಲಿ ಹೇಳಿದ ದೃಷ್ಟಿಕೋನ ಅಥವಾ ಪ್ರಯತ್ನವನ್ನು ಸನಾತನದ ಸಾಧಕರನ್ನು ಕಣ್ಮುಂದಿಟ್ಟುಕೊಂಡು ಬರೆದಿರುವುದರಿಂದ ಅದರಲ್ಲಿ 'ಸಾಧಕ' ಎಂಬ ಉಲ್ಲೇಖವಿದೆ. ಹೀಗಿದ್ದರೂ ಈ ದೃಷ್ಟಿಕೋನ ಅಥವಾ ಪ್ರಯತ್ನವು ಎಲ್ಲರಿಗೂ ಉಪಯುಕ್ತವಾಗಿದೆ.

'ಈ ಕಿರುಗ್ರಂಥದ ಅಧ್ಯಯನದಿಂದ ಎಲ್ಲರಿಂದಲೂ ಸೇವೆಯು ಚೆನ್ನಾಗಿ ಆಗಿ ಅವರ ಶೀಘ್ರ ಆಧ್ಯಾತ್ಮಿಕ ಉನ್ನತಿಯಾಗಲಿ, ಹಾಗೆಯೇ ಸಮಷ್ಟಿ ಸೇವೆಯ ಮಾಧ್ಯಮದಿಂದ ಎಲ್ಲ ಕಡೆ ಅಧ್ಯಾತ್ಮದ ಪ್ರಸಾರವಾಗಿ ಸಂಪೂರ್ಣ ಮಾನವಸಮಾಜವು ಆನಂದಿತವಾಗಲಿ' ಎಂದು ಶ್ರೀ ಗುರುಚರಣಗಳಲ್ಲಿ ಪ್ರಾರ್ಥನೆ !' – **ಸಂಕಲನಕಾರರು**

卐 ——— 卐

**ಮೇ ೨೦೨೧ ರ ವರೆಗೆ ಸನಾತನದ ೩೩೮ ಗ್ರಂಥಗಳ ಕನ್ನಡ, ಹಿಂದಿ, ಆಂಗ್ಲ, ಮರಾಠಿ, ಗುಜರಾತಿ, ತಮಿಳು, ತೆಲುಗು, ಮಲಯಾಳಂ, ಬಂಗಾಲಿ, ಒರಿಯಾ, ಪಂಜಾಬಿ, ಅಸ್ಸಾಮಿ, ನೇಪಾಳಿ, ಜರ್ಮನ್, ಸರ್ಬಿಯನ್, ಫ್ರೆಂಚ್ ಮತ್ತು ಸ್ಪ್ಯಾನಿಶ್ ಈ ೧೭ ಭಾಷೆಗಳಲ್ಲಿ ೮೧,೯೯,೦೦೦ ಪ್ರತಿಗಳು !**

**ಸನಾತನದ ಹೊಸ ಗ್ರಂಥಗಳ ಬಗ್ಗೆ ತಿಳಿದುಕೊಳ್ಳುವುದಿದ್ದಲ್ಲಿ ಸಂಪರ್ಕಿಸಿ –**

chaitanya.grantha@gmail.com ✆ 9342599299

'ಆನ್‌ಲೈನ್'ನಲ್ಲಿ ಖರೀದಿಸಲು – **www.SanatanShop.com**

## ಅನುಕ್ರಮಣಿಕೆ

(ಕೆಲವು ಮಹತ್ವದ ಅಂಶಗಳನ್ನು '*' ಈ ಗುರುತಿನಲ್ಲಿ ಕೊಡಲಾಗಿದೆ.)


**卐 ಮನೋಗತ** ೧೦

**೧. 'ಸತ್ಸೇವೆ' (ಸೇವೆ) ಎಂದರೇನು ?** ೧೩

**೨. ಸೇವೆಯ ಸಂದರ್ಭದಲ್ಲಿ ಇಷ್ಟಾನಿಷ್ಟ, ಶ್ರೇಷ್ಠ-ಕನಿಷ್ಠ ಇತ್ಯಾದಿಗಳ ವಿಚಾರ ಮಾಡದಿರುವುದು** ೧೪

* ಸಾಧಕನು 'ಯಾವ ಸೇವೆ ಮಾಡುತ್ತೇನೆ' ಎಂಬುದಕ್ಕಿಂತ 'ಸೇವೆಯಿಂದ ಮನೋಲಯ ಮತ್ತು ಅಹಂಲಯವಾಗಿ ಚೈತನ್ಯಪ್ರಾಪ್ತಿಯಾಗುತ್ತದೆಯೇ ?' ಎಂದು ನೋಡುವುದು ಮಹತ್ವದ್ದಾಗಿದೆ ೧೯

  * ಪರಾತ್ಪರ ಗುರು ಡಾ. ಜಯಂತ ಆಠವಲೆಯವರು ತಮ್ಮ ಉದಾಹರಣೆಯಿಂದ ಸಾಧಕರಿಗೆ ಎಲ್ಲ ಸೇವೆಗಳನ್ನು ಮಾಡಲು ಕಲಿಸುವುದು ೨೦

* 'ಈಶ್ವರನು ತನ್ನ ಆಯೋಜನೆಗನುಸಾರ ಪ್ರತಿಯೊಬ್ಬ ಸಾಧಕನಿಂದ ಪ್ರತಿಯೊಂದು ಸೇವೆಯನ್ನು ಮಾಡಿಸಿಕೊಳ್ಳುತ್ತಾನೆ' ಎಂಬ ಶ್ರದ್ಧೆಯನ್ನಿಟ್ಟುಕೊಳ್ಳುವುದು ೨೨

**೩. ಆಧ್ಯಾತ್ಮಿಕ ಮಟ್ಟದ ವಿಚಾರದಲ್ಲಿ ಸಿಲುಕುವುದಕ್ಕಿಂತ ಸೇವೆಯಲ್ಲಿನ ಆನಂದ ಪಡೆಯುವುದು ಮಹತ್ವದ್ದಾಗಿದೆ !** ೨೪

೪. ಸೇವೆಯಿಂದ ಶೀಘ್ರ ಆಧ್ಯಾತ್ಮಿಕ ಉನ್ನತಿಯಾಗಲು ಏನು ಮಾಡಬೇಕು ? ೨೫

೪ ಅ. ಪ್ರತಿಯೊಂದು ಸೇವೆಯನ್ನು ಭಾವಪೂರ್ಣ ಮತ್ತು ಪರಿಪೂರ್ಣವಾಗಿ ಮಾಡಲು ಪ್ರಯತ್ನಿಸುವುದು ೨೫

* ಸೇವೆ ಪರಿಪೂರ್ಣವಾಗುವುದಿಲ್ಲವೆಂದು ನಿರಾಶರಾಗಬಾರದು, ಏಕೆಂದರೆ 'ಪರಿಪೂರ್ಣ ಸೇವೆ'ಯು ಧ್ಯೇಯವಾಗಿದೆ ೩೦

  * ಸೇವೆಯು ಪರಿಪೂರ್ಣವಾಗದಿರಲು ಕೆಲವು ಕಾರಣಗಳು ೩೦

  * ಸೇವೆಯಲ್ಲಿ ತಪ್ಪುಗಳಾದಾಗ ಗಮನದಲ್ಲಿಡಬೇಕಾದ ಕೆಲವು ದೃಷ್ಟಿಕೋನಗಳು ೩೨

೪ ಆ. ಸೇವೆಯ ಫಲನಿಷ್ಪತ್ತಿಯನ್ನು ಹೆಚ್ಚಿಸಲು ಪ್ರಯತ್ನ ಮಾಡುವುದು ೩೪

* ಸೇವೆಯನ್ನು ಮಾಡುವಾಗ ಉತ್ಸಾಹದಿಂದಿರಲು ಪ್ರಯತ್ನ ಮಾಡುವುದು ೪೦

* ನಮ್ಮ ಕಾರ್ಯಕ್ಷಮತೆಯನ್ನು ಹೇಗೆ ಹೆಚ್ಚಿಸಬೇಕು ? ೪೩

* ಜಾಗರಣೆ ಮಾಡಿ ಮಾಡಿದ ಸೇವೆಗಿಂತ ಬೆಳಗ್ಗೆ ಬೇಗನೇ ಎದ್ದು ಸೇವೆಯನ್ನು ಮಾಡಿದರೆ ಸೇವೆಯಲ್ಲಿನ ಫಲನಿಷ್ಪತ್ತಿ ಹೆಚ್ಚಾಗುವುದು ೪೮

* ಸಾಧಕರ ಸೇವೆಗಳ ಜವಾಬ್ದಾರಿಯಿರುವ ಸಾಧಕರಿಗೆ ಕೆಲವು ಸೂಚನೆಗಳು ೫೦

೫. ಸೇವೆಯನ್ನು ಮಾಡುವಾಗ ನಡುವೆ ಸ್ವಲ್ಪ ವಿಶ್ರಾಂತಿಯ ಆವಶ್ಯಕತೆಯೆನಿಸಿದರೆ ಆಗ ಸಾತ್ತ್ವಿಕ ಕೃತಿಗಳನ್ನು ಮಾಡುವುದು ೫೨

೬. ಸಾಧಕರು ಇತರರ ಸೇವೆಶುಶ್ರೂಷೆಗಳನ್ನು ಮಾಡುವಾಗ ಹೇಗೆ ಭಾವವನ್ನಿಡಬೇಕು ? ೫೪

೭. ಸಾಧಕರು ಇತರರಿಂದ ಸೇವೆಶುಶ್ರೂಷೆಯನ್ನು ಮಾಡಿಸಿಕೊಳ್ಳುವಾಗ ಹೇಗೆ ಭಾವವನ್ನಿಟ್ಟುಕೊಳ್ಳಬೇಕು ? ೫೬

೮. ಸಮಷ್ಟಿ ಸೇವೆಯನ್ನು ಮಾಡುವಾಗ ಗಮನದಲ್ಲಿಡಬೇಕಾದ ಕೆಲವು ದೃಷ್ಟಿಕೋನಗಳು ೫೭

* ಸಂತರು ಅಥವಾ ಉನ್ನತ ಸಾಧಕರು ಸೇವೆಯ ಸಂದರ್ಭದಲ್ಲಿ ನೀಡಿದ ಯಾವುದಾದರೊಂದು ನಿರ್ಣಯದಲ್ಲಿ 'ಸಮಷ್ಟಿಯ ಹಿತಕ್ಕಾಗಿ ನಮಗೆ ಅವರಿಗೆ ಏನಾದರೂ ಸಲಹೆಯನ್ನು ನೀಡುವುದಿದ್ದಲ್ಲಿ ಅದನ್ನು ನೀಡುವುದು' ಸಮಷ್ಟಿ ಸಾಧನೆಯೇ ಆಗಿದೆ ೫೮

೯. ವ್ಯವಹಾರದಲ್ಲಿನ ಕರ್ಮಗಳನ್ನು, ಸಮಾಜಸೇವೆ ಇತ್ಯಾದಿಗಳನ್ನೂ 'ಸತ್ಸೇವೆ' ಎಂದು ಮಾಡುವುದು ೬೦

ಓದಿ ಸನಾತನದ ಕಿರುಗ್ರಂಥ 'ಪ್ರಾರ್ಥನೆ (ಮಹತ್ವ ಮತ್ತು ಉದಾಹರಣೆಗಳು)'